	ಯುವಜನಸೇವೆ			
14	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ	893.10	358.00	535.10
15	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	15349.85	12280.4	3069.45
16	ರಸ್ತೆ ಸಾರಿಗೆ	394.82	217.52	177.30
17	ಪೋಲೀಸ್ ವಸತಿ ನಿಗಮ	274.91	0.00	274.91
18	ಕಂದಾಯ	2387.82	4946.92	-2559.10
19	ವಸತಿ	10344.86	8666.84	1678.02
20	ಪರಿಶಿಷ್ಟ ವರ್ಗಗಳ ಕಲ್ಯಾಣ (ಕ್ರೋಢೀಕೃತ ಅನುದಾನವು ಸೇರಿ)	17319.36	17243.18	76.18
21	ಕಾರ್ಮಿಕ (ಉದ್ಯೋಗ ಮತ್ತು ತರಬೇತಿ ಸೇರಿ)	757.80	153.01	604.79
22	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	6623.68	3370.92	3252.76
23	ನಗರಾಭಿವೃದ್ಧಿ	17659.57	14329.80	3329.77
24	ಭಾರಿ ಮತ್ತು ಮಧ್ಯಮ ನೀರಾವರಿ	9000.59	6300	2700.59
25	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	1345.01	2355.41	-1010.40
26	ಲೋಕೋಪಯೋಗಿ – ರಸ್ತೆ ಮತ್ತು ಸೇತುವೆಗಳು	3427.25	2302.93	1124.32
27	ಕಾನೂನು	12.22	0.00	12.22
28	ಮಾಹಿತಿ ತಂತ್ರಜ್ಞಾನ	0.47	0.00	0.47
29	ಪೌಷ್ಟಿಕಾಂಶ	747.22	806.98	-59.76
	ಒಟ್ಟು	**126389.08**	**98876.10**	**27512.98**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯದ ಕಟ್ಟಡ ಕುರಿತು

111 ಶ್ರೀ ಬಿದನೂರು.ಎಸ್ ವಿರೂಪಾಕ್ಷಪ್ಪ (ಗದಗ)
ಶ್ರೀ ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) ಗದಗ ನಗರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಕಟ್ಟಡಗಳಿಗೆ ನಿವೇಶನಗಳನ್ನು ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖರೀದಿಸಿದ್ದು, 2009–10ನೇ ಸಾಲಿನಲ್ಲಿ ಅಲ್ಲಿ ಕಟ್ಟಡವನ್ನು ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ ಕಟ್ಟಡ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಲಾಗುವುದು?

ಗದಗ ನಗರದಲ್ಲಿ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಒಂದು ನಿವೇಶನ ಪಡೆದಿದ್ದು, ಕಟ್ಟಡ ನಿರ್ಮಾಣ ಕಾರ್ಯ ಕ್ರಮ ಕೈಗೊಳ್ಳಲಾಗಿದೆ.

ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಗದಗ ನಗರದಲ್ಲಿ ಯಾವುದೇ ವಿದ್ಯಾರ್ಥಿನಿಲಯಗಳು ಇಲ್ಲ.

ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಮೂರು ವಿದ್ಯಾರ್ಥಿನಿಲಯಗಳಿಗೆ ಗದಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಪಡೆಯಲಾಗಿದ್ದು, ಮುಂದಿನ ಆರ್ಥಿಕ ವರ್ಷಗಳಲ್ಲಿ ಆಯವ್ಯಯದ ಲಭ್ಯತೆಯನ್ವಯ ಕಟ್ಟಡ ನಿರ್ಮಾಣ ಕಾರ್ಯವನ್ನು ಪರಿಶೀಲಿಸಲಾಗುವುದು.
ಸಂ:ಸಕಇ 252 ಬಿಎಂಎಸ್ 2009

ಮೊರಾರ್ಜಿ ವಸತಿ ಶಾಲೆಗೆ ಜಮೀನು ಖರೀದಿಸಿದ್ದು, ಕಟ್ಟಡ ನಿರ್ಮಾಣ ಬಗ್ಗೆ.

112 ಶ್ರೀ ಬಿದರೂರು ಎಸ್ ವಿರೂಪಾಕ್ಷ(ಗದಗ)
ಪ್ರೊಡಾ. ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಗದಗ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ನಿವೇಶನ ಖರೀದಿಸಿರುವುದು ನಿಜವೇ; ಹಾಗಿದ್ದಲ್ಲಿ, ಸದರಿ ನಿವೇಶನದಲ್ಲಿ ಕಟ್ಟಡದ ನಿರ್ಮಾಣ ಕೆಲಸವನ್ನು ಪ್ರಾರಂಭಿಸುವುದು ಯಾವಾಗ?

ಹೌದು

ಶಾಲಾ ಸಂಕೀರ್ಣ ನಿರ್ಮಿಸಲು ಟೆಂಡರ್ ಕರೆಯಲಾಗಿದ್ದು, ಒಬ್ಬ ಟೆಂಡರದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ತಾಂತ್ರಿಕ ಅಗತ್ಯತೆಗಳ ಕೊರತೆಯಿಂದ ತಿರಸ್ಕೃತವಾಗಿರುತ್ತದೆ. ದಿನಾಂಕ:1-07-2009ರಂದು ಮರು ಟೆಂಡರ್ ಕರೆಯಲಾಗಿದೆ. ತದನಂತರ, ಅರ್ಹ ಗುತ್ತಿಗೆದಾರರಿಗೆ ಕಾಮಗಾರಿ ಆದೇಶವನ್ನು ನೀಡಲಾಗುವುದು.

113 ಶ್ರೀ ಬಿದರೂರು. ಎಸ್ ವಿರೂಪಾಕ್ಷಪ್ಪ(ಗದಗ)
ರಾಮಚಂದ್ರಗೌಡ(ವೈದ್ಯಕೀಯ ಶಿಕ್ಷಣ ಸಚಿವರು)

1 ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭಿಸುವ ಯೋಜನೆಯು ಸರ್ಕಾರದ ಮುಂದಿದೆಯೇ;

ಇಲ್ಲ

2 ಹಾಗಿದ್ದಲ್ಲಿ, ಗದಗ ಜಿಲ್ಲೆ ಈ ಸೌಲಭ್ಯದಿಂದ ವಂಚಿತವಾಗಿರುವುದು ನಿಜವೇ;

ಉದ್ಭವಿಸುವುದಿಲ್ಲ

3 ಹಾಗಿದ್ದಲ್ಲಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಿ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ ಕೊಡುವುದು ಯಾವಾಗ;

ಉದ್ಭವಿಸುವುದಿಲ್ಲ

114 ಶ್ರೀ ಬಿದರೂರು ಎಸ್ ವಿರೂಪಾಕ್ಷ (ಗದಗ), ಎಂ.ಎಲ್.ಎ
ಪ್ರೊ.ಡಾ. ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) 2008-09ನೇ ಸಾಲಿನಲ್ಲಿ ವಕ್ಫ್ ಅನುದಾನವನ್ನು ಗದಗ ಜಿಲ್ಲೆಯಲ್ಲಿ ಬಿಡುಗಡೆ ಮಾಡಿರುವ ವಿವರವನ್ನು ಒದಗಿಸುವುದು;

2008-09ನೇ ಸಾಲಿನಲ್ಲಿ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಗದಗ ಜಿಲ್ಲೆಯಲ್ಲಿ ವಕ್ಫ್ ಸಂಸ್ಥೆಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಹಾಗೂ 2008-09ನೇ ಸಾಲಿನಲ್ಲಿ ರಾಜ್ಯದ 7 ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿದ್ದು, ಇದರಲ್ಲಿ ಗದಗ ಜಿಲ್ಲೆಯೂ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ಜಿಲ್ಲೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ವಕ್ಫ್ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು.

ಆ) ಶಾದಿಮಹಲ್ ನಿರ್ಮಾಣಕ್ಕಾಗಿ ಕೊಡಲ್ಪಟ್ಟಿರುವ ಅನುದಾನದ ಮೊತ್ತದ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ವಿವರ ಒದಗಿಸುವುದು.

2008-09ನೇ ಸಾಲಿನಲ್ಲಿ ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.1099.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ.

ಶ್ರೀ ಬಿದರೂರು ಎಸ್.ವಿರೂಪಾಕ್ಷ (ಗದಗ) ವಿಧಾನ ಸಭೆಯ ಸದಸ್ಯರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 114 ಕ್ಕೆ

ಅನುಬಂಧ–1

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ
1	ಬೆಂಗಳೂರು (ನ)	20.00
2	ಬೆಂಗಳೂರು (ಗ್ರಾ)	–
3	ಬಾಗಲಕೋಟೆ	70.00
4	ಬೆಳಗಾಂ	56.50
5	ಬಳ್ಳಾರಿ	15.00
6	ಬೀದರ್	–
7	ಬಿಜಾಪುರ	119.00
8	ಚಾಮರಾಜನಗರ	41.00
9	ಚಿಕ್ಕಮಗಳೂರು	52.00
10	ಚಿತ್ರದುರ್ಗಾ	28.00
11	ಚಿಕ್ಕಬಳ್ಳಾಪುರ	17.50
12	ದಕ್ಷಿಣ ಕನ್ನಡ	111.50
13	ದಾವಣಗೆರೆ	40.50
14	ಧಾರವಾಡ	49.00
15	ಗದಗ	28.50
16	ಗುಲ್ಬರ್ಗಾ	43.50
17	ಹಾಸನ	40.00
18	ಹಾವೇರಿ	–
19	ಕೊಡಗು	–
20	ಕೋಲಾರ	15.00
21	ಕೊಪ್ಪಳ	–
22	ಮಂಡ್ಯ	33.50
23	ಮೈಸೂರು	120.00
24	ರಾಯಚೂರು	8.00
25	ರಾಮನಗರ	25.00
26	ಶಿವಮೊಗ್ಗ	67.50

27	ತುಮಕೂರು	31.00
28	ಉಡುಪಿ	15.00
29	ಉತ್ತರಕನ್ನಡ	52.50
30	ಒಟ್ಟು	**1099.50**

131 ಶ್ರೀ ಬಾಲಕೃಷ್ಣ ಹೆಚ್.ಪಿ (ಮಾಗಡಿ)

ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಮನಗರ ಜಿಲ್ಲೆ, ಮಾಗಡಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯನ್ನು ಎಂದಿನಿಂದ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಯಿತು; ಇದರ ರೂಪುರೇಷೆಗಳೇನು:

ಸರ್ಕಾರಿ ಆದೇಶ ಸಂಖ್ಯೆ: ಆಕುಕ 86 ಸಿಜಿಎಸ್ 2005, ದಿನಾಂಕ: 4-01-2006 ರಲ್ಲಿ ಮಾಗಡಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದೆ.

100 ಹಾಸಿಗೆಗಳ ಸಾಮರ್ಥ್ಯಕ್ಕೆ ಕಟ್ಟಡ ಕಾಮಗಾರಿ ಕೈಗೊಳ್ಳಲು ರೂ. 230 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ದಿನಾಂಕ: 14-12-2006 ರಲ್ಲಿ ಮಂಜೂರಾತಿ ನೀಡಲಾಗಿದೆ. ಕಾಮಗಾರಿಯನ್ನು ಮೆ: ನಾಗಾರ್ಜುನ ಕನ್ಸಟ್ರಕ್ಷನ್ ಕಂಪನಿ, ಬೆಂಗಳೂರು ರವರಿಗೆ ವಹಿಸಲಾಗಿದೆ.

ಸದರಿ ಮೇಲ್ದರ್ಜೆಗೇರಿಸಿದ ಆಸ್ಪತ್ರೆಯಲ್ಲಿ ಹೆಚ್ಚುವರಿಯಾಗಿ ನೆಲಮಹಡಿಯಲ್ಲಿ ಮೇಜರ್ ಆಪರೇಷನ್ ಥಿಯೇಟರ್, ಹೆರಿಗೆ ಕೊಠಡಿ, ಕ್ಷ-ಕಿರಣ ಕೊಠಡಿ ಹಾಗೂ ಹಾಲಿ ಕಟ್ಟಡಕ್ಕೆ ನೀರು ಸರಬರಾಜು ಮತ್ತು ನೈರ್ಮಲೀಕರಣ ದುರಸ್ತಿ, ವಿದ್ಯುತ್ ಹಾಗೂ ಶೌಚಾಲಯ ದುರಸ್ತಿ ಮತ್ತು ಒಳ ಹಾಗೂ ಹೊರ ಗೋಡೆಗಳಿಗೆ ಮತ್ತು ಬಾಗಿಲು ಕಿಟಕಿಗಳಿಗೆ ಬಣ್ಣ ಹಚ್ಚುವುದು ಒಳಗೊಂಡಿರುತ್ತದೆ.

ಮೊದಲನೇ ಮಹಡಿಯಲ್ಲಿ ಕಿವಿ, ಮೂಗು ಮತ್ತು ಗಂಟಲು ತಜ್ಞರು, ಮೂಳೆ ತಜ್ಞರು, ಮಕ್ಕಳ ತಜ್ಞರು, ನೇತ್ರ ತಜ್ಞರು, ಕಛೇರಿ ಕೊಠಡಿಗಳು, ಪ್ರಯೋಗಾಲಯ, ರಕ್ತ ಶೇಕರಣಾ ಕೊಠಡಿ, ವಿಶೇಷ ವಾರ್ಡ್‌ಗಳು, ಶೌಚಾಲಯಗಳು ಹಾಗೂ ಸಭಾಂಗಣವನ್ನು ಒಳಗೊಂಡಿರುತ್ತದೆ.

ಆ) ಈ ಆಸ್ಪತ್ರೆಯ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದೆಯೇ; ಹಾಗಿಲ್ಲದಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು;

ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ ಹಾಗೂ ಅಕ್ಟೋಬರ್-2009ರ ವೇಳೆಗೆ ಪೂರ್ಣಗೊಳಿಸಲಾಗುತ್ತದೆ.

ಇ) ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ಅನುಗುಣವಾಗಿ ವೈದ್ಯಕೀಯ ಹಾಗೂ ಇತರೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಯಾವಾಗ ನಿಯೋಜಿಸಲಾಗುವುದು?

ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ಅನುಗುಣವಾಗಿ 12 ವೈದ್ಯರು ಹಾಗೂ 1 ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಎಲ್ಲಾ ಹುದ್ದೆಗಳು ಭರ್ತಿಯಾಗಿವೆ. ಇದಲ್ಲದೆ 61 ವೈದ್ಯೇತರ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 23 ಹುದ್ದೆಗಳು ಭರ್ತಿಯಾಗಿವೆ. ಪ್ರಸ್ತುತ 5245 ವೈದ್ಯೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದ್ದು, ಅದು ಮುಗಿದ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

139 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ) MLA
ಪ್ರೊ.ಡಾ.ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಕಳೆದ ಒಂದು ವರ್ಷದಿಂದ ಈವರೆವಿಗೆ ವಿವಿಧ ಜಿಲ್ಲೆಗಳಲ್ಲಿ ನಿರ್ಮಿಸಲಾಗಿರುವ ಶಾದಿಮಹಲ್ ಸಂಖ್ಯೆ ಎಷ್ಟು; ಇದಕ್ಕಾಗಿ ವೆಚ್ಚವಾಗಿರುವ ಹಣವೆಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

2008–9ನೇ ಸಾಲಿನಲ್ಲಿ ಒಟ್ಟು 102 ಸಂಸ್ಥೆಗಳಿಗೆ ಶಾದಿಮಹಲ್ ನಿರ್ಮಿಸಲು ರೂ. 1099.50 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಸದರಿ ಅವಧಿಯಲ್ಲಿ ಬೀದರ್ ಜಿಲ್ಲೆಯಿಂದ ಯಾವ ಯಾವ ಸ್ಥಳಗಳಲ್ಲಿ ಶಾದಿಮಹಲ್‌ಗಳ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುತ್ತದೆ;

2008–09ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಶಾದಿಮಹಲ್ ನಿರ್ಮಾಣಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಅನುಮೋದನೆ ಸರ್ಕಾರದಿಂದ ದೊರಕಿದೆ; ಉದ್ಭವಿಸುವುದಿಲ್ಲ.

ಈ) ಕಳೆದ ಸಾಲಿನಲ್ಲಿ ಆಯವ್ಯಯ ಹಾಗೂ ಪ್ರಸಕ್ತ ಸಾಲಿನ ಹಣಕಾಸು ವರ್ಷದಲ್ಲಿ ಶಾದಿಮಹಲ್‌ಗಳ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ.

2008–09ನೇ ಸಾಲಿನಲ್ಲಿ ರೂ. 1500.00 ಲಕ್ಷಗಳ ಆಯವ್ಯಯ ಒದಗಿಸಿದ್ದು, ಪರಿಷ್ಕೃತ ಆಯವ್ಯಯ ರೂ. 1000.00 ಲಕ್ಷಗಳು, ಪ್ರಸಕ್ತ ಸಾಲಿನಲ್ಲಿ ರೂ. 1500.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

ಉ) ಈ ಪೈಕಿ ಈವರೆವಿಗೆ ಬಿಡುಗಡೆಯಾದ ಹಣವೆಷ್ಟು (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)?

ಈ ಪೈಕಿ ಈವರೆಗೆ 2008–09 ರಲ್ಲಿ ರೂ. 1099.50 ಲಕ್ಷಗಳು ಮತ್ತು 2009–10ರಲ್ಲಿ ರೂ. 166.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರ ಅನುಬಂಧ–1 ಮತ್ತು 2 ರಲ್ಲಿ ನೀಡಿದೆ.

Shri Eshwar Bheemanna Khandar (Bhalki) M.L.A Question No. 139 Annexure – 1 (2008-09)

(Rs. Lakhs)

Sl No.	District	Released Amount
1	Bangalore	20.00
2	Bangalore Rural	-
3	Bagalkote	70.00
4	Belgaum	56.50
5	Bellary	15.00
6	Bidar	-
7	Bijapur	119.00
8	Chamaraj Nagar	41.00
9	Chickmagalur	52.00
10	Chitradurga	28.00
11	Chikkaballapura	17.50
12	Dakshina Kannada	111.50
13	Davangere	40.50
14	Dharwad	49.00
15	Gadag	28.50
16	Gulbarga	43.50
17	Hassan	40.00
18	Haveri	-
19	Kodagu	-
20	Kolar	15.00
21	Koppal	-
22	Mandya	33.50
23	Mysore	120.00
24	Raichur	8.00
25	Ramanagar	25.00
26	Shimoga	67.50
27	Tumkur	31.00
28	Udupi	15.00
29	Uttra Kannada	52.50
	Total	**1099.50**

ಶ್ರೀ ಈಶ್ವರ್ ಭೀಮಣ್ಣ ಕಂಡ್ರೆ (ಬಾಲ್ಕಿ) ವಿಧಾನ ಸಭೆಯ ಸದಸ್ಯರ ಪ್ರಶ್ನೆ ಸಂಖ್ಯೆ 139ಕ್ಕೆ ಅನುಬಂಧ–2

2009–10ನೇ ಸಾಲಿನಲ್ಲಿ ಶಾದಿಮಹಲ್ / ಸಮುದಾಯಭವನ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಮಂಜೂರಾದ ಸಂಸ್ಥೆಗಳ ವಿವರ(3–7–09 ರ ವರೆಗೆ).

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	ತಾಲ್ಲೂಕು	ಸ್ಥಳ	ಸಮುದಾಯ	ಸಂಸ್ಥೆಯ ಹೆಸರು	ಬಿಡುಗಡೆಯಾದ ಅನುದಾನ
1	ಮೈಸೂರು	ಮೈಸೂರು	ಮೈಸೂರು	ಮುಸ್ಲಿಂ	ದಾರುಲ್ ಎ ಎಂ ಸಿದ್ದೀಖಿಯಾ ಟ್ರಸ್ಟ್	25.00
2	ಮೈಸೂರು	ಮೈಸೂರು	ಮೈಸೂರು	ಕ್ರಿಶ್ಚಿಯನ್	ಕೊಂಕ್ಲಿ ಕ್ರಿಸ್ತಾವಾಂಚೋ ಸಂಘ, (ರಿ)	15.00
3	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ಶಿಡ್ಲಘಟ್ಟ	ಮುಸ್ಲಿಂ	ಬೈಸು ರೂರಲ್ ಡೆವಲಪ್ ಮೆಂಟ್ ಮತ್ತು ಎಜುಕೇಷನ್ ಟ್ರಸ್ಟ್	10.00
		ಗೌರಿಬಿದನೂರು	ಅಲೀಪುರ	ಮುಸ್ಲಿಂ	ದಾರುಜ್ ಜೊಹರಾ ಸೋಷಿಯಲ್ಲ ಅಂಡ್ ವೆಲ್ ಫೇರ್ ಟ್ರಸ್ಟ್	9.00
5	ಚಾಮರಾಜನಗರ	ಕೊಳ್ಳೆಗಾಲ	ಕೊಳ್ಳೆಗಾಲ	ಮುಸ್ಲಿಂ	ಅಂಜುಮನ್ ಇ ಇಸ್ಲಾಮಿಯಾ ಸಂಸ್ಥೆ	10.00
6	ಬಾಗಲಕೋಟೆ	ಜಮಖಂಡಿ	ಅಡಿಹುಡಿ	ಮುಸ್ಲಿಂ	ಇಸ್ಲಾಮಿಯಾ ಜಮಾತ್ ಕಮಿಟಿ	5.00
7	ಗುಲ್ಬರ್ಗಾ	ಚಿತ್ತಾಪುರ	ಅಲ್ದಿಹಾಳ	ಮುಸ್ಲಿಂ	ಅಮ್ಸಿನ್ ಸಮೂಹ ಸೇವಾ ಮತ್ತು ವಿದ್ಯಾವರ್ಧಕ ಸಂಘ	5.00
8	ಉತ್ತರ ಕನ್ನಡ	ಹೊನ್ನಾವರ	ಹೊನ್ನಾವರ	ಕ್ರಿಶ್ಚಿಯನ್	ದಿ ಬ್ರದರ್ಸ್ ಅಫ್ ಹೋಲಿ ಕ್ರಾಸ್ ಸಂಸ್ಥೆ	10.00
9	ದಾವಣಗೆರೆ	ಹರಿಹರ	ಹರಿಹರ	ಜೈನ್	ಭಗವಾನ್ ಪಾರ್ಶ್ವನಾಥ್ ಜೈನ್ ದಿಗಂಬರ ಟ್ರಸ್ಟ್	5.00
10	ದಾವಣಗೆರೆ	ದಾವಣಗೆರೆಟೌನ್	ದಾವಣಗೆರೆ	ಮುಸ್ಲಿಂ	ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್	12.50
11	ಶಿವಮೊಗ್ಗ	ಭದ್ರಾವತಿ	ದೋನಬಘಟ್ಟ	ಮುಸ್ಲಿಂ	ಮಜ್ಜಿದ್ ಎ ಅಜಂ ಕಮಿಟಿ	10.00
12	ಬಿಜಾಪುರ	ಇಂಡಿ	ತಾಂಬಾ	ಮುಸ್ಲಿಂ	ಮೊಹಮ್ಮದಿಯಾ ಅಂಜುಮನ್ ಇಸ್ಲಾಂ ಕಮಿಟಿ	5.00

13	ಬಿಜಾಪುರ	ಬಾಗೇವಾಡಿ	ಬ್ಯಾಕೋಡು	ಮುಸ್ಲಿಂ	ಟಿಪ್ಪು ಸುಲ್ತಾನ ಎಜುಕೇಷನ್ ಮತ್ತು ವೆಲ್ ಫೇರ್ ಸೊಸೈಟಿ	5.00
14	ಬಿಜಾಪುರ	ಮುದ್ದೇಬಿಹಾಳ	ಹಂದ್ರಾಳದಲ್ಲಿ	ಮುಸ್ಲಿಂ	ಮಹಮ್ಮದಿಯಾ ಅಂಜುಮಾನ್ ಇಸ್ಲಾಂ	5.00
15	ಬೆಳಗಾಂ	ಗೋಕಾಕ್	ಶಿಂದಿಕುರಬೆಟ್ಟ	ಮುಸ್ಲಿಂ	ಜಾಮಿಯಾ ಮಸ್ಜಿದ್ ಮುಸ್ಲಿಂ ಜಮಾತ್	5.00
16	ತುಮಕೂರು	ಶಿರಾ	ಶಿರಾ	ಮುಸ್ಲಿಂ	ಎಹ್ರಾರ್ ಎಜುಕೇಷನ್ ಸೊಸೈಟಿ	10.00
17	ದಕ್ಷಿಣ ಕನ್ನಡ ಜಿಲ್ಲೆ	ಸುಳ್ಯ ತಾಲ್ಲೂಕು	ಅರಂತೋಡಿನಲ್ಲಿ	ಮುಸ್ಲಿಂ	ಅನ್ವರುಲ್ ಹುದಾಯಂಗ್ ಮೆಸ್ಸ್ ಅಸೋಸಿಯೋಷನ್	5.00
18	ಕೊಪ್ಪಳ	ಗಂಗಾವತಿ	ಚಿಳ್ಳೂರು ರ್‍ಯಾಂ	ಕ್ರಿಶ್ಚಿಯನ್	ದಿ ಗ್ರಾಡ್ ಎಂ. ದೇವದಾಸ ಮೈಬಲ್ ಮಿಷನ್ ಬೇತಾನಿಯಾ ಟ್ರಸ್ಟ್	5.00
19	ಹಾವೇರಿ	ರಾಣಿಬೆನ್ನೂರು	ರಾಣಿಬೆನ್ನೂರು	ಮುಸ್ಲಿಂ	ಅಂಜುಮನ್ ಎ ಇಸ್ಲಾಂ	10.00
					ಒಟ್ಟು	**166.50**